ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ
ದಿನಾಂಕ : DATE 5/2/2020



## ಸರಕಾರಿ ಭೂಮಿ ಒತ್ತುವರಿ ಪರಿಶೀಲನೆ | ಕಾನೂನು ಕ್ರಮದ ಎಚ್ಚರಿಕೆ

# ಈಗಲ್ಟನ್ ರೆಸಾರ್ಟ್‌ಗೆ ಸದನ ಸಮಿತಿ ಭೇ

**ವಿಕ ಸುದ್ದಿಲೋಕ** ಬಿಡದಿ

ಕಾಂಗ್ರೆಸ್-ಜೆಡಿಎಸ್ ಮೈತ್ರಿ ಸರಕಾರದಲ್ಲಿ ರೆಸಾರ್ಟ್ ರಾಜಕಾರಣದ ಕೇಂದ್ರ ಬಿಂದುವಾಗಿದ್ದ ಬಿಡದಿಯ ಈಗಲ್ಟನ್ ರೆಸಾರ್ಟ್‌ಗೆ ವಿಧಾನಸಭೆಯ ಸಾರ್ವಜನಿಕ ಲೆಕ್ಕಪತ್ರ ಸಮಿತಿ ಮಂಗಳವಾರ ಭೇಟಿ ನೀಡಿ ಪರಿಶೀಲಿಸಿತು.

ಒತ್ತುವರಿ ಮಾಡಿಕೊಂಡಿದ್ದ ಸರಕಾರಿ ಭೂಮಿಗೆ ವಿಧಿಸಲಾಗಿದ್ದ 980 ಕೋಟಿ ರೂ.ಗಳ ಶುಲ್ಕವನ್ನು ಬಾಕಿ ಉಳಿಸಿಕೊಂಡಿರುವ ಆರೋಪ ಸಂಬಂಧ ಪರಿಶೀಲನೆ ನಡೆಯಿತು.

ಸಾರ್ವಜನಿಕ ಲೆಕ್ಕಪತ್ರ ಸಮಿತಿ ಅಧ್ಯಕ್ಷ ಎಚ್.ಕೆ.ಪಾಟೀಲ್ ಹಾಗೂ ಸದಸ್ಯರು ಹಾಗೂ ಜಿಲ್ಲಾಧಿಕಾರಿ ಎಂ.ಎಸ್. ಅರ್ಚನಾ ಹಾಗೂ ಅಧಿಕಾರಿಗಳ ತಂಡ, ರೆಸಾರ್ಟ್ ಸರಹದ್ದಿನಲ್ಲಿರುವ ಸರಕಾರಿ ಭೂಮಿಯನ್ನು ಪರಿಶೀಲನೆ ನಡೆಸಿತು.

**208 ಎಕರೆ ಒತ್ತುವರಿ:** ಈ ಸಂದರ್ಭದಲ್ಲಿ ಸಮಿತಿ ಅಧ್ಯಕ್ಷ ಎಚ್.ಕೆ.ಪಾಟೀಲ್ ಸುದ್ದಿಗಾರರೊಂದಿಗೆ ಮಾತನಾಡಿ, ಈಗಲ್ಟನ್ ರೆಸಾರ್ಟ್ ಸುಪರ್ದಿನಲ್ಲಿ 508.33 ಎಕರೆ ಭೂಮಿ ಇದ್ದು, ಇದರಲ್ಲಿ 208.33 ಎಕರೆ ಸರಕಾರಿ ಭೂಮಿಯ ಒತ್ತುವರಿಯೂ ಸೇರಿಕೊಂಡಿದೆ ಎಂದು ಕಂದಾಯ ಇಲಾಖೆ ಅಧಿಕಾರಿಗಳು ಹೈಕೋರ್ಟ್ ಮತ್ತು ಸುಪ್ರಿಂಕೋರ್ಟ್‌ಗೆ ದಾಖಲೆಗಳನ್ನು ನೀಡಿದ್ದಾರೆ. ಒತ್ತುವರಿಯಾಗಿರುವ ಸರಕಾರಿ ಭೂಮಿ ಪೈಕಿ 28.33 ಎಕರೆಯನ್ನು ತೆರವುಗೊಳಿಸುವಂತೆ, ಬಾಕಿ 78 ಎಕರೆ ಭೂಮಿಯ ಮಾರುಕಟ್ಟೆ ಶುಲ್ಕ ಕಟ್ಟಿಸಿಕೊಳ್ಳುವಂತೆ ನ್ಯಾಯಾಲಯ ಆದೇಶ ನೀಡಿತ್ತು.

ಅದರಂತೆ ಈಗಲ್ಟನ್ ರೆಸಾರ್ಟ್‌ನವರು 2015ರಲ್ಲಿ 28.33 ಎಕರೆ ಭೂಮಿಯನ್ನು ಸರಕಾರಕ್ಕೆ ವಾಪಸ್ ಬಿಟ್ಟುಕೊಟ್ಟಿದ್ದಾರೆ. ಉಳಿಕೆ 78 ಎಕರೆ ಭೂಮಿಗೆ ಮಾರುಕಟ್ಟೆ ಬೆಲೆ 980 ಕೋಟಿ ರೂ. ಕಟ್ಟಬೇಕಾಗಿತ್ತು. ಈ ಮೊತ್ತವನ್ನು ಪಾವತಿಸುವಂತೆ ಸಂಪುಟ ಉಪ ಕಮಿಟಿಯಲ್ಲೂ ನಿರ್ಣಯವಾಗಿದೆ. ಆದರೆ ರೆಸಾರ್ಟ್‌ನವರು ಈ ನಿರ್ಣಯದ ವಿರುದ್ಧ ಹೈಕೋರ್ಟ್‌ನಲ್ಲಿ ದಾವೆ ಹೂಡಿದ್ದಾರೆ ಎಂದರು.



ಈಗಲ್ಟನ್ ರೆಸಾರ್ಟ್‌ಗೆ ಆಗಮಿಸಿದ್ದ ವಿಧಾನಸಭೆಯ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಅಧ್ಯಕ್ಷ ಎಚ್.ಕೆ.ಪಾಟೀಲ್ ಮಾಧ್ಯಮದವರೊಂದಿಗೆ ಮಾತನಾಡಿದರು.

**ಈಗಲ್ಟನ್ ರೆಸಾರ್ಟ್ ಸರಕಾರಿ ಭೂಮಿ ಒತ್ತುವರಿ ವಿಚಾರದಲ್ಲಿ ಸದನ ಸಮಿತಿ (ಪಿಎಸಿ) ಸದಸ್ಯರು ಸ್ಥಳ ಪರಿಶೀಲನೆಗೆ ಬಂದಿದ್ದಾರೆ. ಒಟ್ಟು ಒತ್ತುವರಿ 106 ಎಕರೆ ಪೈಕಿ 28 ಎಕರೆ ಭೂಮಿಯನ್ನು ವಾಪಸ್ ಪಡೆಯಲಾಗಿದೆ. ಉಳಿಕೆ 78 ಎಕರೆ ಭೂಮಿಗೆ ಶುಲ್ಕ ಕಟ್ಟಿಸಿಕೊಳ್ಳಬೇಕಾಗಿದೆ. ಆದರೆ ಜಿಲ್ಲಾಡಳಿತ ಭೂಮಿಗೆ ನಿಗದಿ ಮಾಡಿರುವ ವ್ಯಾಲ್ಯುಯೇಷನ್ ಜಾಸ್ತಿಯಾಯ್ತು ಅಂತ ಈಗಲ್ಟನ್ ಸಂಸ್ಥೆ ಮತ್ತೆ ಕೋರ್ಟ್ ಮೆಟ್ಟಿಲೇರಿದೆ. ತೀರ್ಪು ಬರುವವರೆಗೆ ಕಾಯಬೇಕಿದೆ.**

**-ಎಂ.ಎಸ್.ಅರ್ಚನಾ** ಜಿಲ್ಲಾಧಿಕಾರಿ, ರಾಮನಗರ ಜಿಲ್ಲೆ

**ಅಧಿಕಾರಿಗಳಿಗೆ ಸೂಚನೆ:** ಇಲ್ಲಿ ಬಿ ಖರಾಬು, ಎ ಖರಾಬು ಗೋಮಾಳ ಸೇರಿದಂತೆ ಇನ್ನೂ ಸರಕಾರಿ ಭೂಮಿ ಇದೆ. ರೆಸಾರ್ಟ್‌ನಿಂದ ಮರುವಶ ಪಡೆದಿರುವ 28.33 ಎಕರೆ ಭೂಮಿಯ ಪರಿಶೀಲನೆಗೆ ಬಂದಿದ್ದೇವೆ. ವಾಪಸ್ ಪಡೆದ ಭೂಮಿಗೆ 'ಸರಕಾರಿ ಆಸ್ತಿ' ಎಂದು ಬೋರ್ಡ್ ಹಾಕಿಲ್ಲ. ಈ ಬಗ್ಗೆ ಅಧಿಕಾರಿಗಳಿಗೆ ಸೂಕ್ತ ಸೂಚನೆ ನೀಡಿದ್ದೇವೆ. ಉಳಿದ ಭೂಮಿಯ ಬಗ್ಗೆ ಕಾನೂನಾತ್ಮಕವಾಗಿ ಕ್ರಮ ತೆಗೆದುಕೊಳ್ಳುತ್ತೇವೆ. ಕಾನೂನಿಗಿಂತ ದೊಡ್ಡವರು ಯಾರೂ ಇಲ್ಲ, ಕಾನೂನು ತಿರುಚಲು ಪಿಎಸಿ ಸಮಿತಿ ಬಿಡುವುದಿಲ್ಲ ಎಂದು ಎಚ್.ಕೆ.ಪಾಟೀಲ್ ತಿಳಿಸಿದರು.

### 12 ಕೋ... ಪಾವತಿಸಿ...

ಸರಕಾರಿ ಭೂಮಿ ಒತ್ತುವ... 980 ಕೋಟಿ ದಂಡ ನಿ... ಅದನ್ನು ಐದು ಕಂತುಗಳ... ಪಾವತಿಸುವಂತೆ ಸೂಚಿಸ... ಹಿಂದಿನ ಕಾಂಗ್ರೆಸ್ ಸರ... ನಿರ್ಣಯದಂತೆ 2017 ... ಮೊದಲ ಕಂತಿನಲ್ಲಿ 12,3... ರೂ.ಗಳನ್ನು ಸರಕಾರಕ್ಕೆ ಪಾ... ಲಾಗಿದೆ. ಆದರೆ, ಈ ವಿ... ಅಧಿಕಾರಿಗಳು ಸಮಿತಿಯ... ತಂದಿಲ್ಲ ಎಂದು ಈಗಲ್... ರೆಸಾರ್ಟ್‌ನ ಆಡಳಿತ ಮ... ಸದಸ್ಯರೊಬ್ಬರು ವಿಕಕ್ಕೆ ತಿ...

ಸಮಿತಿಯ ಸದಸ್ಯ... ಬೋಪಯ್ಯ, ಕೆ.ಆರ್.ರ... ಎ.ಟಿ.ರಾಮಸ್ವಾಮಿ, ... ಕೆ.ಜಿ.ಬೋಪಯ್ಯ, ನಾ... ನಾಗೇಶ್ ಹಾಗೂ ಕಂದಾಯ... ಹಿರಿಯ ಅಧಿಕಾರಿಗಳು ... ಕಾರಿ ಎಂ.ಎಸ್.ಅರ್ಚನಾ, ... ನರಸಿಂಹಮೂರ್ತಿ ಹಾಗೂ ... ಡಿವೈಎಸ್‌ಪಿ ... ಹಾಜರಿದ್ದರು.

...ಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತ
...ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ,
...ನ.26612642, 26506782, 26678324,
...4, 26676325, ಫ್ಯಾಕ್ಸ್: 080-26628521
ದಿನಾಂಕ: 03.02.2020
...ಕೃತಿ ಬಾಕಿ/ ಅನುಬಂಧ – IV
...) ನಿಯಮಗಳು 2002
...ನ ಸೂಚನೆ (ಸ್ಥಿರಾಸ್ತಿಗಾಗಿ)
...ಕ್ಸ್ ಬ್ಯಾಂಕ್ ನಿಯಮಿತ, ಬೆಂಗಳೂರು-560018
...ನಾಗಿದ್ದು ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್
...ಮೆಂಟ್ ಆಫ್ ಸೆಕ್ಯೂರಿಟಿ ಇಂಟ್ರೆಸ್ಟ್ ಆಕ್ಟ್ 2002
2 ರ 3 ... ಅನ್ವಯ ಮತ್ತು ಸೆಕ್ಯೂರಿಟಿ ...